289
ಗೆಲಂ

ಇಂಡಿಯಾ ಸರ್ಕಾರ್ ವ್ಯಾಪಾರ ಮತ್ತು ಕೈಗಾರಿಕೆಯ ಇಲಾಖಾ.

ಸಿಂಲಾ, 23ನೆ ಸೆಪ್ಟಂಬರ್ 1907.

ಪ್ರೆಸ್ ನೋಟ್.

1908ನೆ ಇಸವಿಯಲ್ಲಿ ಲಂಡ್ಸ್ ಪಟ್ಟಣದಲ್ಲಿ ನಡೆಸುವ ಫ್ರ್ಯಾಂಕೊ ಬ್ರಿಟಿಷ್ ಪ್ರದರ್ಶನಕ್ಕೆ ಇಂಡಿಯಾ ದೇಶದಿಂದ ಸರ್ಕಾರ್ ತಪ್ಪ್ಪ ಪ್ರತಿನಿಧಿಯನ್ನು ಕಳುಹಿಸುವುದರ ವಿಷಯವಾಗಿಯೂ, ಪ್ರದರ್ಶಕರಾಗಬೇಕೆಂದಿರುವವರಿಗೆ ದ್ರವ್ಯಸಹಾಯ ಮಾಡುವುದರ ವಿಚಾರವಾಗಿಯೂ, ಇಂಡಿಯಾ ಸರ್ಕಾರದವರು ಸ್ಟೇಟ್ ಸೆಕ್ರಿಟೆರಿಯವರೊಡನೆ ಕಾಗದ ಪತ್ರಗಳನ್ನು ನಡೆಸುತ್ತಿದ್ದರು. ಸದರಿ ಪ್ರದರ್ಶನದಲ್ಲಿ ಇಂಡಿಯಾ ಗವರ್ನ್‌ಮೆಂಟಿನವರು ಸರ್ಕಾರ್ ತರ್ಫಾಗಿ ಯಾವ ಕೆಲಸವನ್ನೂ ಕೈಗೊಳ್ಳುವುದಿಲ್ಲವೆಂದು ಆಖ್ಯೈರ್ ತೀರಾನವಾಗಿದೆ. ಇಂಡಿಯಾ ದೇಶದ ಸ್ಥಳೀಯ ಕೈಗಾರಿಕೆಯಲ್ಲಿಯೇ ತಯಾರಾದ ಜವುತ್ತ್ಕರವಾದ ಪದಾರ್ಥಗಳನ್ನು ಪ್ರದರ್ಶನಕ್ಕೆ ಕಳುಹಿಸುವವರಿಗೆ ಸಹಾಯ ಮಾಡುವುದಕ್ಕೋಸ್ಕರ ಲಂಡ್ಸ್‌ಪಟ್ಟಣದಲ್ಲಿ, ಈ ಪ್ರದರ್ಶನಕ್ಕೆ ಸಂಬಂಧಪಟ್ಟು, ಆರ್ಗನೈಜಿಂಗ ಕಮಿಟಿ ಎಂಬ ಒಂದು ಸಂಘವು ಏರ್ಪಡುತ್ತಲಿದೆ. ಈ ಕಮಿಟಿಗೆ 5,000 ಪೌಂಡುಗಳ ಗ್ಯಾರಂಟಿನ್ನು ಕೊಡಲಾಗುತ್ತದೆ. ಈ ಮೊಬಲಗಿನಲ್ಲಿ ಸದರಿ ಕಮಿಟಿಯವರು ತಮಗೆ ಅವಶ್ಯವೆಂದು ತೋರುವ ದ್ರವ್ಯ ಸಹಾಯವನ್ನು ಇಂಡಿಯಾ ದೇಶದ ಪ್ರದರ್ಶಕರಿಗೆ ಕೊಡುವರು. ಆ ಗ್ಯಾರಂಟಿ ಮೊಬಲಗನ್ನು ಹಂಚುವ ಬಗ್ಗೆ ರೆಗ್ಯುಲೇಷನುಗಳನ್ನು ತಯಾರ್ಮಾಡಬೇಕೆಂದು ಇಂಡಿಯ್ಯ ಕಮಿಟಿಯವರನ್ನು ಕೇಳಿ ಇದೆ. ಅವು ಬಂದ ಒಡನೆ, ಸವುಸ್ತರ ತಿಳಿವಳಿಕೆಯ ಬಗ್ಗೆ ಅವುಗಳನ್ನು ಇಂಡಿಯಾದಲ್ಲಿ ಪ್ರಕಟಿಸಲಾಗುವುದು.

2. ಪ್ರದರ್ಶಕರಾಗಬೇಕೆಂದು ಉದ್ದೇಶವಿರುವವರಿಗೆ ದ್ರವ್ಯ ಸಹಾಯಬೇಕಾದರೆ ಅವರು ಆ ಬಗ್ಗೆ ನೇಟಾಗಿ ಇಂಡಿಯ್ಯ ಕಮಿಟಿಯವರಿಗೆ ಬರೆದುಕೊಳ್ಳಬೇಕು. ಪ್ರದರ್ಶನ ವಸ್ತುಗಳ ರವಾನೆಯ ಬಗ್ಯೂ ಅವುಗಳಿಗೆ ಪ್ರದರ್ಶನ ಶಾಲೆಯಲ್ಲಿ ಸ್ಥಳ ಏರ್ಪಡಿಸುವ ಬಗ್ಯೂ ಅಲ್ಲಿ ಅವರ ಸಾಮಾನುಗಳ ಕಾವಲಿನ ಬಗ್ಯೂ ಸಹ ಪ್ರದರ್ಶಕರು ಪ್ರದರ್ಶನಾಧಿಕಾರಿಗಳೊಡನೆ ತಾವೇ ಸ್ವಂತ ವಿಚಾರ್ಡು ಮಾಡಿಕೊಳ್ಳಬೇಕಾಗುವುದು.

ಹುಕುಂ ಖವೋಜೇಬ್,
ಸಿ. ಎಸ್. ಬಾ ಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟೆರಿ.